KAVN400009612023

# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ,

# ಹಡಗಲಿ

ಉಪಸ್ಥಿತಿ

**ಶ್ರೀಮತಿ.ಅಕ್ಷತಾ.ಟಿ**

ಬಿ.ಎ.ಎಲ್,ಎಲ್,ಬಿ. ಎಲ್.ಎಲ್.ಎಮ್,

ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ

ದಂಡಾಧಿಕಾರಿಗಳು, ಹಡಗಲಿ.

**ತೀರ್ಪಿನ ದಿನಾಂಕಃ 1 ನೇ ಜೂನ್ 2026**

## ಸಿ.ಸಿ.ನಂ.368/2023

ಇಟ್ಟಿಗಿ ಪೋಲಿಸ್ ಠಾಣೆ,ಹಡಗಲಿ. ....ಪಿರ್ಯಾದುದಾರರು

(ಸ ಸ ಅ ರವರು)

- ವಿರುದ್ಧ -

ಗಡ್ಡಿ ಸಂಗನಗೌಡ
ವಾಸಃ ಇಟ್ಟಿಗಿ ಗ್ರಾಮ,
ತಾ:ಹಡಗಲಿ,
ಜಿಃವಿಜಯನಗರ ಜಿಲ್ಲೆ. ....ಆರೋಪಿ

(ಆರೋಪಿ ಪರ ಶ್ರೀ.ಕೆ.ಕೆ.,ವಕೀಲರು)

| | | |
|---|---|---|
| 1.ಅಪರಾಧ ನಡೆದ ದಿನಾಂಕ | : | 17.01.2023 |
| 2.ಅಪರಾಧ ವರದಿಯ ದಿನಾಂಕ | : | 01.04.2023 |
| 3.ಪ್ರಥಮ ಮಾಹಿತಿದಾರರ ಹೆಸರು | : | ವೀರೇಶ್ ಪೂಲಾಶೆಟ್ಟಿ |
| 4.ಸಾಕ್ಷ್ಯವನ್ನು ಅಭಿಲೇಖಿಸುವ ಪ್ರಾರಂಭದ ದಿನಾಂಕ | : | 12.08.2024 |

5.ಸಾಕ್ಷ್ಯವನ್ನು ಅಭಿಲೇಖಿಸುವ ಕೊನೆಯ ದಿನಾಂಕ : **29.05.2026**

6.ಆರೋಪಿತನ ವಿರುದ್ಧ ಮಾಡಲಾದ ಅಪಾದನೆಗಳು : ಕರ್ನಾಟಕ ಅಬಕಾರಿ ಕಾಯ್ದೆ ಕಲಂಃ32 ಮತ್ತು 34 ರಡಿಯಲ್ಲಿ

7.ನ್ಯಾಯಾಧೀಶರ ಅಭಿಪ್ರಾಯ : ದೋಷಾರೋಪಣೆ ಸಾಭೀತಾಗಿರುವುದಿಲ್ಲ.

# ತೀರ್ಪು

ಇಟ್ಟಿಗಿ ಪೋಲಿಸ್ ಠಾಣೆ, ಇಟ್ಟಿಗಿ ಇವರು ಆರೋಪಿತನ ವಿರುದ್ಧ ಕರ್ನಾಟಕ ಅಬಕಾರಿ ಕಾಯ್ದೆ ಕಲಂಃ 32 ಮತ್ತು 34 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತಾರೆಂದು ಪ್ರಸ್ತುತ ದೋಷಾರೋಪಣೆ ಪತ್ರವನ್ನು ಸಲ್ಲಿಸಿರುತ್ತಾರೆ.

2) <u>ಅಭಿಯೋಜನೆ ಪ್ರಕರಣದ ಸಂಕ್ಷಿಪ್ತ ಸಾರಾಂಶಃ</u>-

ದಿನಾಂಕ **07-01-2023** ರಂದು ಸಂಜೆ **08-30** ಗಂಟೆ ಸುಮಾರಿಗೆ ಇಟ್ಟಿಗಿ ಪೊಲೀಸ ಠಾಣೆಯ ವ್ಯಾಪ್ತಿಯ ಇಟ್ಟಿಗಿ ಗ್ರಾಮದ ಕನ್ನಿಹಳ್ಳಿ ರಸ್ತೆಯಲ್ಲಿ ಆರೋಪಿತ ತನ್ನ ಬೀಡಿ ಅಂಗಡಿ ಮುಂದಿನ ಸಾರ್ವಜನಿಕ ಸ್ಥಳದಲ್ಲಿ ಆರೋಪಿತನು ಸರ್ಕಾರದಿಂದ ಯಾವುದೇ ಪರವಾನಗಿ ಇಲ್ಲದೆ ಅನಧಿಕೃತವಾಗಿ ಮದ್ಯ ಸಂಗ್ರಹಿಸಿ ಕಾನೂನು ಬಾಹಿರವಾಗಿ ಮಾರಾಟ ಮಾಡುತ್ತಿದ್ದು, ಚಾಸಾ-**1** ರವರು ಪಂಚರು ಹಾಗೂ ಸಿಬ್ಬಂದಿಯವರೊಡನೆ ದಾಳಿ ಮಾಡಿದಾಗ, ಸದರಿ ಸ್ಥಳದಲ್ಲಿ ಇದ್ದಂತಹ ಒಂದು ಪ್ಲಾಸ್ಟಿಕ್ ಚೀಲದಲ್ಲಿ ಮದ್ಯದ ಮಾಲನ್ನು ಪರಿಶೀಲನೆ ಮಾಡಿ ನೋಡಲಾಗಿ ಅದರಲ್ಲಿ ಒಟ್ಟು ಮದ್ಯದ ಬೆಲೆ ರೂ.**1334.94/-** ಮದ್ಯವಿದ್ದು, ಚಾಸಾ-**1** ರವರು ಪಂಚರ ಸಮಕ್ಷಮ ಸದರಿ ಅಕ್ರಮ ಮದ್ಯವನ್ನು ವಶಪಡಿಸಿಕೊಂಡಿದ್ದು ಮತ್ತು ಸರ್ಕಾರದಿಂದ ಯಾವುದೇ ಅಧಿಕೃತ ಪರವಾನಿಗೆ ಇಲ್ಲದೆ ಮದ್ಯದವನ್ನು ಮಾರಾಟ ಮಾಡುವುದು ಅಪರಾಧ ಎಂದು

ಗೊತ್ತಿದ್ದರೂ ಸಹ ಅನಧಿಕೃತವಾಗಿ ಒಟ್ಟು ಮದ್ಯದ ಬೆಲೆ ರೂ.**1334.94/-** ಮದ್ಯವಿದ್ದು, ಅಕ್ರಮ ಮದ್ಯವನ್ನು ನಿಮ್ಮ ಸ್ವಾಧೀನದಲ್ಲಿ ಇಟ್ಟುಕೊಂಡು ಮಾರಾಟ ಮಾಡುತ್ತಿದ್ದು, ಆರೋಪಿತನ ವಿರುದ್ಧ ಕರ್ನಾಟಕ ಅಬಕಾರಿ ಕಾಯ್ದೆ ಕಲಂ:32 ಮತ್ತು 34 ಕರ್ನಾಟಕ ಅಬಕಾರಿ ಕಾಯ್ದೆ ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುವುದು ಅಪರಾಧವಾಗಿರುತ್ತದೆ.

3) ಚಾಸಾ.1 ರವರು ಸಲ್ಲಿಸಿದ ಪ್ರಥಮ ಮಾಹಿತಿಯ ಮೆರೆಗೆ ಇಟ್ಟಗಿ ಪೊಲೀಸ್ ಠಾಣೆ, ಇಟ್ಟಗಿ ಗುನ್ನೆ ನಂಬರ.3/2023 ರಂತೆ ಪ್ರಕರಣರವನ್ನು ದಾಖಲಿಸಿಕೊಂಡಿರುತ್ತಾರೆ.

4) ಚಾಸಾ.9 ರವರು ತನಿಖೆಯನ್ನು ಪೂರೈಸಿ ದೊಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

5) ದೋಷಾರೋಪಣೆಯನ್ನು ಸಲ್ಲಿಸಿದ ನಂತರ, ಈ ನ್ಯಾಯಾಲಯದಿಂದ ಆರೋಪಿತನ ವಿರುದ್ಧ ಸಂಜ್ಞೆಯನ್ನು ತೆಗೆದುಕೊಳ್ಳಲಾಯಿತು. ನ್ಯಾಯಾಲಯದ ಆದೇಶ ಜಾರಿಯಾದ ಮೇಲೆ ಆರೋಪಿತನು ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನು ಪಡೆದುಕೊಂಡಿರುತ್ತಾರೆ. ನಂತರ ಆರೋಪಿತನಿಗೆ ಕಲಂ. 207 ಸಿ.ಆರ್.ಪಿ.ಸಿ. ಪ್ರಕಾರ ದೋಷಾರೋಪಣೆಯ ಪ್ರತಿಯನ್ನು ನೀಡಲಾಯಿತು. ಕಲಂ.313 ರಡಿಯಲ್ಲಿ ಆರೋಪಿತನ ಹೇಳಿಕೆಯನ್ನು ಆಲಿಸಲಾಯಿತು.

6) ಆರೋಪಿತನ ಮೇಲೆ ದೋಷಾರೋಪಣೆಯನ್ನು ಹೊರಿಸಲಾಗಿದ್ದು, ಆರೋಪಿತನು ತಪ್ಪು ಒಪ್ಪಿಕೊಳ್ಳದೆ ವಿಚಾರಣೆ ಆಗಲು ಕೇಳಿಕೊಂಡಿರುತ್ತಾರೆ. ಅಭಿಯೋಜನೆಯು ತನ್ನ ಪ್ರಕರಣವನ್ನು ಸಾಭೀತು ಪಡಿಸಲು ಫ್ರಾಸಾ.01 ರಿಂದ

ಫ್ರಾಸಾ.7 ರವರನ್ನು ಸಾಕ್ಷಿ ವಿಚಾರಣೆ ಮಾಡಿಸಿ, ನಿಪಿ.01 ರಿಂದ 9 ಹಾಗೂ ಮುದ್ದೆ ಮಾಲು-1 ಮತ್ತು 2 ನೇದ್ದನ್ನು ಗುರುತಿಸಿಕೊಂಡಿರುತ್ತಾರೆ.

7) ಅಭಿಯೋಜನೆಯ ಮತ್ತು ಆರೋಪಿತನ ಪರ ವಕೀಲರ ವಾದ ವಿವಾದಗಳನ್ನು ಕೇಳಲಾಯಿತು. ಕಡತದಲ್ಲಿ ಲಭ್ಯವಿರುವ ದಾಖಲಾತಿಯನ್ನು ಪರಿಶೀಲಿಸಿದ ನಂತರ ಈ ಕೆಳಕಂಡ ಅಂಶಗಳು ತಿರ್ಮಾನಕ್ಕಾಗಿ ಬಂದಿರುತ್ತವೆಃ

<u>ಅಂಶ ನಂ.1:</u> ದಿನಾಂಕ 07-01-2023 ರಂದು ಸಂಜೆ 08-30 ಗಂಟೆ ಸುಮಾರಿಗೆ ಇಟ್ಟಿಗಿ ಪೊಲೀಸ ಠಾಣೆಯ ವ್ಯಾಪ್ತಿಯ ಇಟ್ಟಿಗಿ ಗ್ರಾಮದ ಕನ್ನಿಹಳ್ಳಿ ರಸ್ತೆಯಲ್ಲಿ ಆರೋಪಿತನು ತನ್ನ ಬೀಡಿ ಅಂಗಡಿ ಮುಂದಿನ ಸಾರ್ವಜನಿಕ ಸ್ಥಳದಲ್ಲಿ ಕಾನೂನು ಬಾಹಿರವಾಗಿ ಅವನ ಸ್ವಂತ ಲಾಭಕ್ಕಾಗಿ ಸರಕಾರದ ಯಾವುದೇ ಅನುಮತಿ, ಪರವಾನಿಗೆ ಇಲ್ಲದೆ ಸಾರ್ವಜನಿಕರಿಗೆ ಮದ್ಯವನ್ನು ಮಾರಾಟ ಮಾಡಿ ಮತ್ತು ಅಕ್ರಮ ದಾಸ್ತನುಮಾಡಿ ಸಿಕ್ಕಿದ್ದು, ಆ ಮೂಲಕ ಕರ್ನಾಟಕ ಅಬಕಾರಿ ಕಾಯ್ದೆ ಕಲಂಃ 32 ರಡಿಯಲ್ಲಿ ಶಿಕ್ಷಾರ್ಹ ಅಪರಾಧಗಳು ಎಸಗಿರುವುದಾಗಿ ಅಭಿಯೋಜನೆಯು ಸಂಶಯಾತೀತವಾಗಿ ಸಾಭೀತುಪಡಿಸುತ್ತದೆಯೇ?

<u>ಅಂಶ ನಂ.2:</u> ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿತನು ಯಾವುದೇ ಪರವಾನಿಗೆ ಪಡೆಯದೇ ಮದ್ಯ ಮಾರಾಟ ಮಾಡಿರುವುದು ಅನಧಿಕೃತ ಎಂದು ಗೊತ್ತಿದ್ದು ಅವುಗಳನ್ನು ಮಾರಾಟ ಮಾಡುತ್ತಿದ್ದಾಗ ಸಿಕ್ಕಿದ್ದು, ಆ ಮೂಲಕ ಕರ್ನಾಟಕ ಅಬಕಾರಿ ಕಾಯ್ದೆ ಕಲಂಃ 34 ಕೆ.ಇ. ಕಾಯ್ದೆ ರಡಿಯಲ್ಲಿ ಶಿಕ್ಷಾರ್ಹ ಅಪರಾಧಗಳು ಎಸಗಿರುವುದಾಗಿ ಅಭಿಯೋಜನೆಯು ಸಂಶಯಾತೀತವಾಗಿ ಸಾಭೀತು ಪಡಿಸುತ್ತದೆಯೇ?

<u>ಅಂಶ ನಂ.3</u>: ಆದೇಶ ಏನು ?

8) ಮೇಲಿನ ಅಂಶಗಳನ್ನು ಈ ಕೆಳಗಿನಂತೆ ಉತ್ತರಿಸಲಾಗಿದೆ.

ಅಂಶ *1:-* ನಕಾರಾತ್ಮಕ

ಅಂಶ *2:-* ನಕಾರಾತ್ಮಕ

ಅಂಶ *3:-* ಈ ಕೆಳಗಿನ ಕಾರಣಗಳಿಗಾಗಿ ಅಂತಿಮ ಆದೇಶದಂತೆ.

## ಕಾರಣಗಳು

**9)** ಅಂಶ ನಂ-1 ಮತ್ತು **2**:- ಅಂಶ **1** ಮತ್ತು **2** ಇವುಗಳು ಒಂದೆ ರೀತಿಯ ಚರ್ಚೆಯ ವಿಷಯಗಳನ್ನು ಹೊಂದಿರುವುದರಿಂದ ಅವುಗಳನ್ನು ಒಟ್ಟಿಗೆ ಚರ್ಚೆಗಾಗಿ ತೆಗೆದುಕೊಳ್ಳಲಾಯಿತು. ಅಭಿಯೋಜನೆಯ ಪ್ರಕಾರ,

ದಿನಾಂಕ **07-01-2023** ರಂದು ಸಂಜೆ **08-30** ಗಂಟೆ ಸುಮಾರಿಗೆ ಇಟ್ಟಿಗಿ ಪೊಲೀಸ ಠಾಣೆಯ ವ್ಯಾಪ್ತಿಯ ಇಟ್ಟಿಗಿ ಗ್ರಾಮದ ಕನ್ನಿಹಳ್ಳಿ ರಸ್ತೆಯಲ್ಲಿ ಆರೋಪಿತ ತನ್ನ ಬೀಡಿ ಅಂಗಡಿ ಮುಂದಿನ ಸಾರ್ವಜನಿಕ ಸ್ಥಳದಲ್ಲಿ ಆರೋಪಿತನು ಸರ್ಕಾರದಿಂದ ಯಾವುದೇ ಪರವಾನಗಿ ಇಲ್ಲದೆ ಅನಧಿಕೃತವಾಗಿ ಮಧ್ಯ ಸಂಗ್ರಹಿಸಿ ಕಾನೂನು ಬಾಹಿರವಾಗಿ ಮಾರಾಟ ಮಾಡುತ್ತಿದ್ದು, ಚಾಸಾ-**1** ರವರು ಪಂಚರು ಹಾಗೂ ಸಿಬ್ಬಂದಿಯವರೊಡನೆ ದಾಳಿ ಮಾಡಿದಾಗ, ಸದರಿ ಸ್ಥಳದಲ್ಲಿ ಇದ್ದಂತಹ ಒಂದು ಪ್ಲಾಸ್ಟಿಕ್ ಚೀಲದಲ್ಲಿ ಮಧ್ಯದ ಮಾಲನ್ನು ಪರಿಶೀಲನೆ ಮಾಡಿ ನೋಡಲಾಗಿ ಅದರಲ್ಲಿ ಒಟ್ಟು ಮಧ್ಯದ ಬೆಲೆ ರೂ.**1334.94/-** ಮಧ್ಯವಿದ್ದು, ಚಾಸಾ-**1** ರವರು ಪಂಚರ ಸಮಕ್ಷಮ ಸದರಿ ಅಕ್ರಮ ಮಧ್ಯವನ್ನು ವಶಪಡಿಸಿಕೊಂಡಿದ್ದು ಮತ್ತು ಸರ್ಕಾರದಿಂದ ಯಾವುದೇ ಅಧಿಕೃತ ಪರವಾನಿಗೆ ಇಲ್ಲದೆ ಮಧ್ಯದವನ್ನು ಮಾರಾಟ ಮಾಡುವುದು ಅಪರಾಧ ಎಂದು ಗೊತ್ತಿದ್ದರೂ ಸಹ ಅನಧಿಕೃತವಾಗಿ ಒಟ್ಟು ಮಧ್ಯದ ಬೆಲೆ ರೂ.**1334.94/-** ಮಧ್ಯವಿದ್ದು, ಅಕ್ರಮ ಮಧ್ಯವನ್ನು ನಿಮ್ಮ ಸ್ವಾಧೀನದಲ್ಲಿ ಇಟ್ಟುಕೊಂಡು ಮಾರಾಟ ಮಾಡುತ್ತಿದ್ದು, ಆರೋಪಿತನ ವಿರುದ್ದ ಕರ್ನಾಟಕ ಅಬಕಾರಿ ಕಾಯ್ದೆ ಕಲಂ:**32** ಮತ್ತು 34 ಕರ್ನಾಟಕ ಅಬಕಾರಿ ಕಾಯ್ದೆ ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುವುದು ಅಪರಾಧವಾಗಿರುತ್ತದೆ.

10) ತನ್ನ ಪ್ರಕರಣವನ್ನು ಸಾಬೀತುಪಡಿಸಲು ಅಭಿಯೋಜನೆಯು ತನ್ನ ಪರವಾಗಿ ಫ್ರಾಸಾ–1 ರಿಂದ ಫ್ರಾಸಾ–07 ಅಂತಾ, ವಿಚಾರಣೆ ಮಾಡಿ ಮತ್ತು ನಿಪಿ1 ರಿಂದ 9 ಹಾಗೂ ಮುದ್ದೆ ಮಾಲು–1 ಮತ್ತು 2 ನೇದ್ದನ್ನು ಗುರುತಿಸಿಕೊಂಡಿರುತ್ತಾರೆ.

11) ಚಾಸಾ 2 ರವರನ್ನು ಫ್ರಾಸಾ.1 ಎಂದು ವಿಚಾರಣೆ ಮಾಡಲಾಗಿ ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಆರೋಪಿತನ ಪರಿಚಯ ತನಗೆ ಇರುವುದಿಲ್ಲ, ತಾನು ಸುಮಾರು 1 ವರ್ಷದ ಹಿಂದೆ ಕೂಲಿ ಮುಗಿಸಿಕೊಂಡು ಮನೆಗೆ ಬರುವ ಸಮಯದಲ್ಲಿ ಪೋಲಿಸರು ತನ್ನನ್ನು ಕರೆದಿರುತ್ತಾರೆ, ಪೋಲಿಸರ ಕೊರಿಕೆಯ ಮೇರೆಗೆ ತಾನು 2 ದಾಖಲೆಗಳ ಮೇಲೆ ಸಹಿ ಮಾಡಿರುತ್ತೇನೆ, ತನ್ನ ಸಮಕ್ಷಮ ಯಾವುದೇ ವಸ್ತುವನ್ನು ಪೋಲಿಸರು ಜಪ್ತ ಪಡಿಸಿಕೊಂಡಿರುವುದಿಲ್ಲ, ನಿಪಿ.1 ಮತ್ತು 2 ರಲ್ಲಿ ಇರುವ ವಿಚಾರಗಳು ತನಗೆ ಗೋತ್ತಿರುವುದಿಲ್ಲವೆಂದು, ಸದರಿ ಸಾಕ್ಷಿಯು ಅಭಿಯೋಜನೆಗೆ ಪ್ರತಿಕೂಲ ಸಾಕ್ಷಿಯನ್ನು ನುಡಿದಿರುತ್ತಾರೆ.

12) ಚಾಸಾ 3 ರವರನ್ನು ಫ್ರಾಸಾ.2 ಎಂದು ವಿಚಾರಣೆ ಮಾಡಲಾಗಿ ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಆರೋಪಿತನ ಪರಿಚಯ ತನಗೆ ಇರುವುದಿಲ್ಲ, ತಾನು ಸುಮಾರು 1 ವರ್ಷದ ಹಿಂದೆ ಕೂಲಿ ಮುಗಿಮುಗಿಸಿಕೊಂಡು ಮನೆಗೆ ಬರುವ ಸಮಯದಲ್ಲಿ ಪೋಲಿಸರು ತನ್ನನ್ನು ಕರೆದಿರುತ್ತಾರೆ, ಪೋಲಿಸರ ಕೋರಿಕೆಯ ಮೇರೆಗೆ ತಾನು 2 ದಾಖಲೆಗಳ ಮೇಲೆ ಸಹಿ ಮಾಡಿರುತ್ತೇನೆ, ತನ್ನ ಸಮಕ್ಷಮ ಯಾವುದೇ ವಸ್ತುವನ್ನು ಪೋಲಿಸರು ಜಪ್ತ ಪಡಿಸಿಕೊಂಡಿರುವುದಿಲ್ಲ, ನಿಪಿ.1 ಮತ್ತು 2 ರಲ್ಲಿ ಇರುವ ವಿಚಾರಗಳು ತನಗೆ ಗೋತ್ತಿರುವುದಿಲ್ಲವೆಂದು, ಸದರಿ ಸಾಕ್ಷಿಯು ಅಭಿಯೋಜನೆಗೆ ಪ್ರತಿಕೂಲ ಸಾಕ್ಷಿಯನ್ನು ನುಡಿದಿರುತ್ತಾರೆ.

**13)** ಚಾಸಾ**6** ರವರನ್ನು ಪ್ರಾಸಾ.**3** ಎಂದು ವಿಚಾರಣೆ ಮಾಡಲಾಗಿ ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ,ಆರೋಪಿತನ ಪರಿಚಯ ನನಗೆ ಇರುತ್ತದೆ. ಆರೋಪಿತನು ನಮ್ಮ ಊರಿನವರಾಗಿರುತ್ತಾರೆ. ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ ನಾನು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಹೇಳಿಕೆಯನ್ನು ನೀಡಿರುವುದಿಲ್ಲ ನನ್ನ ಸಮಕ್ಷಮ ಯಾವುದೇ ವಸ್ತುವನ್ನು ಪೋಲಿಸರು ಜಪ್ತು ಪಡಿಸಿಕೊಂಡಿರುವುದಿಲ್ಲ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಬೇರೆ ಯಾವುದೇ ಮಾಹಿತಿ ನನಗೆ ಗೊತ್ತಿರುವುದಿಲ್ಲವೆಂದು, ಸದರಿ ಸಾಕ್ಷಿಯು ಅಭಿಯೋಜನೆಗೆ ಪ್ರತಿಕೂಲ ಸಾಕ್ಷಿಯನ್ನು ನುಡಿದಿರುತ್ತಾರೆ.

**14)** ಚಾಸಾ **7** ರವರನ್ನು ಪ್ರಾಸಾ.**4** ಎಂದು ವಿಚಾರಣೆ ಮಾಡಲಾಗಿ ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ತನಗೆ ಆರೋಪಿತನ ಪರಿಚಯ ಇರುವುದಿಲ್ಲ, ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ತನಗೆ ಯಾವುದೇ ಮಾಹಿತಿ ಇರುವುದಿಲ್ಲ ತಾನು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಹೇಳಿಕೆಯನ್ನು ನೀಡಿರುವುದಿಲ್ಲ ತನ್ನ ಸಮಕ್ಷಮ ಯಾವುದೇ ವಸ್ತುವನ್ನು ಪೋಲಿಸರು ಜಪ್ತು ಪಡಿಸಿಕೊಂಡಿರುವುದಿಲ್ಲ, ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಬೇರೆ ಯಾವುದೇ ಮಾಹಿತಿ ತನಗೆ ಗೊತ್ತಿರುವುದಿಲ್ಲವೆಂದು, ಸದರಿ ಸಾಕ್ಷಿಯು ಅಭಿಯೋಜನೆಗೆ ಪ್ರತಿಕೂಲ ಸಾಕ್ಷಿಯನ್ನು ನುಡಿದಿರುತ್ತಾರೆ.

**15)** ಚಾಸಾ**1** ರವರನ್ನು ಪ್ರಾಸಾ.**5** ಎಂದು ವಿಚಾರಣೆ ಮಾಡಲಾಗಿ ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ದಿನಾಂಕ **07-01-2023** ರಂದು ಬೆ. **08.05** ಗಂಟೆಗೆ ತಾನು ಠಾಣಾ ಕರ್ತವ್ಯದಲ್ಲಿದ್ದಾಗ ಬಾತ್ಮಿದಾರರಿಂದ ಇಟಗಿ ಗ್ರಾಮದ ಗಡ್ಡಿ ಸಂಗನಗೌಡನ ಬಿಡಿ ಅಂಗಡಿಯ ಮುಂದಿನ ಸಾರ್ವಜನಿಕ ಸ್ಥಳದಲ್ಲಿ ಅಕ್ರಮ ಮಧ್ಯ

ಮಾರಾಟ ಮಾಡುತ್ತಿರುವುದರ ಕುರಿತು ಖಚಿತ ಬಾತ್ಮಿ ಮಾಹಿತಿ ಬಂದಿರುತ್ತದೆ. ಸದರಿ ಮಾಹಿತಿಯನ್ನು ಚಾ.ಸಾ.04 ಮತ್ತು 05 ರವರಿಗೆ ತಿಳಿಸಿ ಚಾ.ಸಾ.04 ರವರಿಗೆ ದಾಳಿಗೆ ಹೋಗಲು ಇಬ್ಬರು ಪಂಚರನ್ನು ಕರೆದುಕೊಂಡು ಬರಲು ತಿಳಿಸಿರುತ್ತೇನೆ ಅದರಂತೆ ಚಾ.ಸಾ.04 ರವರು ಚಾ.ಸಾ.02 ಮತ್ತು 3 ರವರನ್ನು ಕರೆದುಕೊಂಡು ಬಂದು ತನ್ನ ಮುಂದೆ ಹಾಜರುಪಡಿಸಿರುತ್ತಾರೆ. ಸದರಿ ಬಾತ್ಮಿ ಬಂದ ವಿಷಯವನ್ನು ಪಂಚರಿಗೂ ಸಹ ತಿಳಿಸಿ ನೋಟೀಸನ್ನು ಜಾರಿ ಮಾಡಿ ಪಂಚರಾಗಲು ಕೋರಿಕೊಂಡಿರುತ್ತೇನೆ. ಅದರಂತೆ ಅವರು ಪಂಚರಾಗಿ ಒಪ್ಪಿಕೊಂಡಿದ್ದರಿಂದ ಸದರಿ ಪಂಚರು ಮತ್ತು ಚಾ.ಸಾ.4 ಮತ್ತು 5 ರವರನ್ನು ಕರೆದುಕೊಂಡು ತಮ್ಮ ಠಾಣಾ ಜೀಪಿನಲ್ಲಿ ಬೆ.08.15 ಗಂಟೆಗೆ ಠಾಣೆಯಿಂದ ಹೊರಟು 08.25 ಗಂಟೆಗೆ ಇಟಗಿ ಗ್ರಾಮದ ಕನ್ನಿಹಳ್ಳಿ ರಸ್ತೇಯ ಗಡ್ಡಿ ಸಂಗನಗೌಡನ ಬಿಡಿ ಅಂಗಡಿಯಿಂದ ಸ್ವಲ್ಪ ದೂರದಲ್ಲಿ ತಮ್ಮ ಜೀಪನ್ನು ಮರೆಮಾಚಿ ನೋಡಲಾಗಿ ಸದರಿ ಅಂಗಡಿಯ ಮುಂದೆ ಒಬ್ಬ ವ್ಯಕ್ತಿ ಮಧ್ಯದ ಪ್ಯಾಕೆಟಗಳನ್ನು ಜನರಿಗೆ ಕೊಡುತ್ತಿರುವುದನ್ನು ಖಚಿತಪಡೆಸಿಕೊಂಡು ಆತನ ಮೇಲೆ ದಾಳಿ ಮಾಡಲಾಗಿ ಅಲ್ಲಿ ಸೇರಿದ್ದ ಜನರು ಮತ್ತು ಮಧ್ಯ ಮಾರಾಟ ಮಾಡುತ್ತಿದ್ದ ವ್ಯಕ್ತಿ ಸ್ಥಳದಲ್ಲಿಯೇ ಪ್ಲಾಸ್ಟಿಕ್ ಚೀಲವನ್ನು ಬಿಟ್ಟ ಓಡಿ ಹೋಗಿರುತ್ತಾರೆ. ಆಗ ತಾನು ತಮ್ಮ ಸಿಬ್ಬಂಧಿ ಮತ್ತು ಪಂಚರ ಸಮಕ್ಷಮ ಸದರಿ ಪ್ಲಾಸ್ಟಿಕ್ ಚೀಲವನ್ನು ಪರಿಶೀಲಿಸಿ ನೋಡಲಾಗಿ ಅದರಲ್ಲಿ 90 ಎಮ್.ಎಲ್.ನ ಓರಿಜಿನಲ್ ಚಾಯ್ಸು ವಿಸ್ಕೀಯ 38 ಪೌಚಗಳು ಇದ್ದವು. ಸದರಿ ಪೌಚಗಳನ್ನು ಅದೇ ಪ್ಲಾಸ್ಟಿಕ ಚೀಲದಲ್ಲಿ ಹಾಕಿ ಅದಕ್ಕೆ SHO ಎಂಬ ಅರಗಿನಿಂದ ಸೀಲು ಮಾಡಿ ತನ್ನ ಮತ್ತು ಪಂಚರ ಸಹಿಯುಳ್ಳ ಚೀಟಿಯನ್ನು ಅಂಟಿಸಿ ಅಮಾನತ್ತುಪಡೆಸಿಕೊಂಡಿರುತ್ತೇನೆ. ಸ್ಥಳದಲ್ಲಿ ಬೆ.08.35 ರಿಂದ 09.35 ಗಂಟೆಯವರೆಗೆ ಪಂಚನಾಮೆ ಜರೂಗಿಸಿ ಕಚ್ಚಾ ನಕಾಶೆಯನ್ನು

ತಯಾರಿಸಿರುತ್ತೇನೆ. ನಂತರ ಪಂಚನಾಮೆ ಕಚ್ಚಾ ನಕಾಶೆ ಮತ್ತು ಸದರಿ ಮಧ್ಯದ ಪೌಚಗಳೊಂದಿಗೆ ಠಾಣೆಗೆ ವಾಪಸ ಬಂದು **ಬೆ.09.45** ಗಂಟೆಗೆ **ಚಾ.ಸಾ.09** ರವರಿಗೆ ಆರೋಪಿತನ ವಿರುದ್ಧ ದೂರು ದಾಖಲಿಸಿರುತ್ತೇನೆ. **ದಿ.16-01-2023** ರಂದು ಘಟನಾ ದಿನದಂದು ಓಡಿ ಹೋದ ಆರೋಪಿತನು ಮಾನ್ಯ ನ್ಯಾಯಾಲಯದಿಂದ ಜಾಮೀನು ಪಡೆದು ಠಾಣೆಗೆ ಹಾಜರಾಗಿದ್ದು ಆತನನ್ನು ಠಾಣಾಧಿಕಾರಿಯವರ ಮುಂದೆ ಘಟನಾ ದಿನದಂದು ಮಧ್ಯ ಮಾರಾಟ ಮಾಡುತ್ತಿದ್ದ ವ್ಯಕ್ತಿ ಈತನೇ ಎಂದು ನೋಡಿ ಗುರುತಿಸಿರುವುದಾಗಿ ಮರುಹೇಳಿಕೆ ನೀಡಿರುತ್ತೇನೆ ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ, ಸದರಿ ಸಾಕ್ಷಿಯು ಅಭಿಯೋಜನೆಗೆ ಸಾಕ್ಷಿಯನ್ನು ನುಡಿದಿರುತ್ತಾರೆ.

**16).** ಪ್ರಾಸಾ **5** ರವರ ತಮ್ಮ ಪಾಟೀಸವಾಲಿನಲ್ಲಿ ಈ ಪ್ರಕರಣದ ಮಾಹಿತಿ ಬಂದ ತಕ್ಷಣ ಠಾಣಾವಹಿಯಲ್ಲಿ ನಮೂದು ಮಾಡಿರುತ್ತೇವೆ, ಸದರಿ ವಹಿಯನ್ನು ಹಾಜರುಪಡಿಸಿರುವುದಿಲ್ಲ ಅದು ತನಿಖಾಧಿಕಾರಿಯವರಿಗೆ ಬಿಟ್ಟಿದ್ದು, ಒಬ್ಬ ಪಂಚರಿಂದ **4** ಸಹಿಯನ್ನು ಪಡೆದಿರುತ್ತೇವೆ, **4** ಬಾರಿ ಪಂಚರ ಸಹಿಯನ್ನು **4** ಕಡಗೆ ತೆಗೆದುಕೊಂಡಿರುತ್ತೇವೆ, ಪಂಚನಾಮೆಯನ್ನು ಲ್ಯಾಪಟಾಪಿನಲ್ಲಿ ಘಣಕೀಕೃತ ಮಾಡಿ ದೂರನ್ನು ಯಾರು ಘಣಕೀಕೃತ ಮಾಡಿರುತ್ತಾರೆ ಎಂದು ದೂರಿನಲ್ಲಿ ಬರೆದಿರುವುದಿಲ್ಲ, ದಾಳಿ ಮಾಡುವ ಸಂದರ್ಭದಲ್ಲಿ ಛಾಯಾ ಚಿತ್ರಗಳನ್ನು ತೆಗೆದಿರುವುದಿಲ್ಲ, ದಾಳಿ ಮಾಡಲು ಪಂಚರನ್ನು ಒಳಗೊಂಡು ಒಟ್ಟು **5** ಜನ ಹೋಗಿರುತ್ತೇವೆ, ನ್ಯಾಯಾಲಯದ ಮುಂದೆ ಇರುವಂತಹ ಮುದ್ದೆ ಮಾಲುಗಳು ಮತ್ತು ಪ್ಲಾಸ್ಟಿಕ **s** ಚೀಲ ಹೊರಗಡೆ ಸಾಕಷ್ಟು ಸಿಗುತ್ತವೆ ಎಂದರೆ ಸರಿ ಎಂದು ನುಡಿದಿರುತ್ತಾರೆ.

17) ಚಾಸಾ9 ರವರನ್ನು ಪ್ರಾಸಾ.6 ಎಂದು ವಿಚಾರಣೆ ಮಾಡಲಾಗಿ ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ದಿನಾಂಕ 07-01-2023 ರಂದು ಬೆ.09.45 ಗಂಟೆಗೆ ಸುಮಾರಿಗೆ ತಾನು ಠಾಣಾ SHO ಕರ್ತವ್ಯದಲ್ಲಿದ್ದಾಗ ಚಾಸಾ-1 ರವರು ಠಾಣೆಗೆ ಹಾಜರಾಗಿ ಪಂಚನಾಮೆ ಮತ್ತು ಮುದ್ದೆ ಮಾಲನ್ನು ಮತ್ತು ವಿಶೇಷ ವರದಿಯನ್ನು ಹಾಜರುಪಡಿಸಿ, ನೀಡಿದ ಜ್ಞಾಪನ ದೂರನ್ನು ಸ್ವೀಕರಿಸಿ, ಅದರ ಸಾರಾಂಶದಂತೆ ಠಾಣೆ ಗುನ್ನ ಸಂಖ್ಯೆ 03/2023 ರಂತೆ ಪ್ರಕರಣವನ್ನು ದಾಖಲಿಕೊಂಡು ಪ್ರ.ವ. ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಅದೇ ದಿನ ಚಾಸಾ-1 ರವರು ಹಾಜರು ಪಡಿಸಿದ್ದ 90 ಎಮ್.ಎಲ್.ನ ಓ.ಸಿ. ವಿಸ್ಕೀಯ 38 ಮದ್ಯದ ಪೌಚ್ ಗಳು ಮತ್ತು ಒಂದು ಹಳೆಯ ಪ್ಲಾಸ್ಟಿಕ ಚೀಲವನ್ನು ಠಾಣಾ ಸ್ವತ್ತು ಪಟ್ಟಿ ಸಂಖ್ಯೆ 03/2023 ರಂತೆ ಅಳವಡಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಅದೇ ದಿನ ಚಾ.ಸಾ.04 ಮತ್ತು 05 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ದಿ.08-01-2023 ರಂದು ಚಾ.ಸಾ.06 ಮತ್ತು 07 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ದಿ.15-01-2023 ರಂದು ಸದರಿ ಮಧ್ಯದ ಪೌಚಗಳನ್ನು ರಸಾಯನಿಕ ವಿಶ್ಲೇಷಣೆಗಾಗಿ ಕಳುಹಿಸಿಕೊಡಲು ಮಾನ್ಯ ಪೊಲೀಸ್ ಉಪಅಧಿಕ್ಷಕರವರ ಕಛೇರಿ ಹರಪ್ಪನಹಳ್ಳಿರವರಿಗೆ ಪತ್ರ ಮುಖೇಖ ಸಲ್ಲಿಸಿರುತ್ತೇನೆ. ದಿ.16-01-2023 ರಂದು ಚಾ.ಸಾ.01, 04 ಮತ್ತು 05 ರವರ ಮರು ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಅದೇ ದಿನ ಈ ಪ್ರಕರಣದ ಆರೋಪಿ ಮಾನ್ಯ 3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಹೊಸಪೇಟೆಯಿಂದ ನಿರೀಕ್ಷಣಾ ಜಾಮೀನು ಪಡೆದು ಠಾಣೆಗೆ ಹಾಜರಾಗಿದ್ದರಿಂದ ಆತನ ವಿರುದ್ಧ ನಿಯಮಾನುಸಾರ ಕ್ರಮ ಕೈಗೊಂಡು ಠಾಣಾ ಜಾಮಿನಿನ ಮೇಲೆ ಬಿಡುಗಡೆ

ಮಾಡಿರುತ್ತೇನೆ. ದಿ.18-01-2023 ರಂದು ಚಾ.ಸಾ.01 ರವರು ಹಾಜರುಪಡಿಸಿದ ಸದರಿ ಮಧ್ಯದ ಪೌಚಗಳನ್ನು ಮಾನ್ಯ ಪೊಲೀಸ್ ಉಪಅಧಿಕ್ಷಕರವರ ಕಛೇರಿ ಹರಪ್ಪನಹಳ್ಳಿರವರ ಅನುಮತಿ ಪತ್ರದೊಂದಿಗೆ ಠಾಣಾ ಸಿಬ್ಬಂಧಿ ನಾಗರಾಜ ಪಿ.ಸಿ. 328 ರವರೊಂದಿಗೆ ರಾಯಚೂರು ರಸಾಯನಿಕ ವಿಶ್ಲೇಷಣಾ ಘಟಕಕ್ಕೆ ಕಳುಹಿಸಿಕೊಟ್ಟಿರುತ್ತೇನೆ. ದಿ.01-04-2023 ರಂದು FSL ವರದಿಯನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಅದೇ ದಿನ ಈ ಪ್ರಕರಣದಲ್ಲಿ ತನಿಖೆ ಪೂರ್ಣಗೊಂಡಿದ್ದರಿಂದ ಆರೋಪಿತನ ವಿರುದ್ಧ ಸಾಕಷ್ಟು ಸಾಕ್ಷ್ಯಾದಾರಗಳಿಂದ ಆರೋಪ ದೃಡಪಟ್ಟಿದ್ದರಿಂದ ದೋಷಾರೋಪಣೆಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ, ಸದರಿ ಸಾಕ್ಷಿಯು ಅಭಿಯೋಜನೆಗೆ ಸಾಕ್ಷಿಯನ್ನು ನುಡಿದಿರುತ್ತಾರೆ.

18). ಪ್ರಾಸಾ 6 ರವರ ತಮ್ಮ ಪಾಟೀಸವಾಲಿನಲ್ಲಿ ನ್ಯಾಯಾಲಯದ ಮುಂದೆ ಇರುವಂತಹ ಮುದ್ದೆಮಾಲುಗಳು ಸಾಕಷ್ಟು ಹೊರಗಡೆ ಸಿಗುತ್ತವೆ ಎಂದರೆ ಸರಿ, ಚಾ.ಸಾ.01 ರವರು ಲಿಖಿತ ದೂರು, ಪಂಚನಾಮೆ ಮತ್ತು ಮುದ್ದೆಮಾಲನ್ನು ಸ್ವೀಕರಿಸಿರುತ್ತೇನೆ ಎನ್ನುವ ಮಾತು ಸುಳ್ಳು ಎಂದರೆ ಸರಿಯಲ್ಲ, ಈ ಪ್ರಕರಣದಲ್ಲಿ ಸಾಕ್ಷಿದಾರರ ಹೇಳಿಕೆ ಮತ್ತು ಮರುಹೇಳಿಕೆಯನ್ನು ಪಡೆದಿರುತ್ತೇನೆ ಎನ್ನುವ ಮಾತು ಸುಳ್ಳು ಎಂದರೆ ಸರಿಯಲ್ಲ, ರಸಾಯನಿಕ ಪರೀಕ್ಷೆಗೆ ಮುದ್ದೆಮಾಲನ್ನು ಕಳುಹಿಸಿ ಅಲ್ಲಿಂದ ವರದಿಯನ್ನು ಪಡೆದಿರುತ್ತೇನೆ ಎನ್ನುವ ಮಾತು ಸುಳ್ಳು ಎಂದರೆ ಸರಿಯಲ್ಲ ಎಂದು ನುಡಿದಿರುತ್ತಾರೆ.

19) ಚಾಸಾ5 ರವರನ್ನು ಪ್ರಾಸಾ.7 ಎಂದು ವಿಚಾರಣೆ ಮಾಡಲಾಗಿ ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ,ದಿನಾಂಕ 17-01-2023 ರಂದು ಬೆ.8.05

ಗಂಟೆಗೆ ಸುಮಾರಿಗೆ ತಾನು ಮತ್ತು ಚಾ.ಸಾ.04 ರವರು ಠಾಣೆಯಲ್ಲಿದ್ದಾಗ ಚಾ.ಸಾ.01 ರವರು ತಮ್ಮನ್ನು ಕರೆದು, ಇಟಗಿ ಗ್ರಾಮದ ಕನ್ನಿಹಳ್ಳಿ ರಸ್ತೇಯ ಗಡ್ಡಿ ಸಂಗನಗೌಡ ಈತನ ಬಿಡಿ ಅಂಗಡಿಯ ಮುಂದೆ ಅಕ್ರಮವಾಗಿ ಮಧ್ಯ ಸಂಗ್ರಹಿಸಿ ಮಾರಾಟ ಮಾಡುತ್ತಿರುವುದಾಗಿ ಖಚಿತ ಮಾಹಿತಿ ಬಂದಿರುತ್ತದೆ ದಾಳಿಗೆ ಹೋಗಬೇಕೆಂದು ತಿಳಿಸಿರುತ್ತಾರೆ. ಆಗ ಚಾ.ಸಾ.01 ರವರು ಸದರಿ ದಾಳಿಗೆ ಹೋಗಲು ಚಾ.ಸಾ.04 ರವರಿಗೆ ಇಬ್ಬರು ಪಂಚರನ್ನು ಕರೆತರಲು ತಿಳಿಸಿರುತ್ತಾರೆ ಅದರಂತೆ ಚಾ.ಸಾ.04 ರವರು ಚಾ.ಸಾ.02 ಮತ್ತು 03 ರವರನ್ನು ಕರೆದುಕೊಂಡು ಬಂದು ಚಾ.ಸಾ.01 ರವರ ಮುಂದೆ ಹಾಜರುಪಡಿಸಿರುತ್ತಾರೆ. ಆಗ ಚಾ.ಸಾ.01 ರವರು ಪಂಚರಿಗೆ ತಮಗೆ ಬಂದ ಮಾಹಿತಿಯನ್ನು ತಿಳಿಸಿ ದಾಳಿಗೆ ಹೋಗಲು ಪಂಚರಾಗಿ ಸಹಕರಿಸಬೇಕೆಂದು ಕೇಳಿಕೊಂಡ ಮೇರೆಗೆ ಅವರು ಒಪ್ಪಿದ್ದರಿಂದ ನಾನು ಚಾ.ಸಾ.04 ಹಾಗೂ ಪಂಚರು ಚಾ.ಸಾ.01 ರವರೊಂದಿಗೆ ತಮ್ಮ ಇಲಾಖಾ ವಾಹನದಲ್ಲಿ ಬೆ.08.15 ಗಂಟೆಗೆ ಠಾಣೆಯಿಂದ ಹೊರಟು ಇಟಗಿ ಗ್ರಾಮದ ಕನ್ನಿಹಳ್ಳಿ ರಸ್ತೇಗೆ ಬೆ. 08.25 ಕ್ಕೆ ಹೋಗಿ ತಮ್ಮ ವಾಹನವನ್ನು ನಿಲ್ಲಿಸಿ ಜೀಪಿನಿಂದ ಇಳಿದು ಸ್ವಲ್ಪ ದೂರದಲ್ಲಿ ನಿಂತು ಮರೆಮಾಚಿ ನೋಡಲಾಗಿ ಒಬ್ಬ ವ್ಯಕ್ತಿ ಅಕ್ರಮವಾಗಿ ಒಂದು ಪ್ಲಾಸ್ಟಿಕ ಚೀಲದಲ್ಲಿ ಅಕ್ರಮವಾಗಿ ಮಧ್ಯ ಸಂಗ್ರಹಿಸಿಟ್ಟುಕೊಂಡು ಮಾರಾಟ ಮಾಡುವುದನ್ನು ಖಾತ್ರಿ ಪಡೆಸಿಕೊಂಡು ಬೆ.08.30 ಗಂಟೆಗೆ ಸದರಿ ವ್ಯಕ್ತಿಗಳ ಮೇಲೆ ದಾಳಿ ಮಾಡಿರುತ್ತೇನೆ. ಆಗ ತಾವು ದಾಳಿ ಮಾಡುತ್ತಿದ್ದಂತೆ ಅಲ್ಲಿ ಸೇರಿದ್ದ ಸಾರ್ವಜನಿಕರು ಓಡಿ ಹೋಗಿರುತ್ತಾರೆ. ಮಧ್ಯ ಮಾರಾಟ ಮಾಡುತ್ತಿದ್ದ ವ್ಯಕ್ತಿಯೂ ಸಹ ಓಡಿ ಹೋಗಿರುತ್ತಾನೆ. ಸದರಿ ವ್ಯಕ್ತಿ ಗಡ್ಡಿ ಸಂಗನಗೌಡ ಎಂದು ಚಾ.ಸಾ.01 ರವರೊಂದಿಗೆ ಮಾಹಿತಿ ಬಂದಿರುತ್ತದೆ. ಮಧ್ಯ ಮಾರಾಟ ಮಾಡಿ ಸ್ಥಳದಲ್ಲಿ ಬಿಟ್ಟು ಹೋಗಿದ್ದ ಒಂದು ಪ್ಲಾಸ್ಟಿಕ ಚೀಲವನ್ನು ಪಂಚರ ಸಮಕ್ಷಮ

ಪರಿಶೀಲಿಸಿ ನೋಡಲಾಗಿ **90** ಎಮ್.ಎಲ್.ನ ಓರಿಜಿನಲ್ ಚಾಯ್ಸು ವಿಸ್ಕೀಯ **38** ಪೌಚಗಳು ದೊರೆತಿರುತ್ತವೆ. ಸದರಿ ಪೌಚಗಳನ್ನು ಪಂಚರ ಸಮಕ್ಷಮ ವಶಕ್ಕೆ ಪಡೆದು ಅರಗಿನಿಂದ ಸೀಲು ಮಾಡಿ ಅದೇ ಪ್ಲಾಸ್ಟಿಕ ಚೀಲದಲ್ಲಿ ಹಾಕಿ ಚಾ.ಸಾ.**01** ಮತ್ತು ಪಂಚರವರ ಸಹಿಯುಳ್ಳ ಚೀಟಿಯನ್ನು ಅಂಟಿಸಿ ಬೆ.**08.35** ರಿಂದ **09.35** ಗಂಟೆಯವರೆಗೆ ಸ್ಥಳದಲ್ಲಿಯೇ ಪಂಚನಾಮೆ ಜರೂಗಿಸಿ ಮಧ್ಯದ ಪೌಚಗಳನ್ನು ಅಮಾನತ್ತು ಪಡೆಸಿಕೊಂಡಿರುತ್ತೇವೆ. ನಂತರ ಬೆ.**09.45** ಗಂಟೆಗೆ ಠಾಣೆಗೆ ವಾಪಸ್ಸು ಬಂದು ಮಧ್ಯ ಮಾರಾಟ ಮಾಡಿ ಸ್ಥಳದಲ್ಲಿಯೇ ಮಧ್ಯದ ಚೀಲವನ್ನು ಬಿಟ್ಟು ಓಡಿ ಹೋಗಿದ್ದ ವ್ಯಕ್ತಿಯ ವಿರುದ್ಧ ಚಾ.ಸಾ.**01** ರವರು ಚಾ.ಸಾ.**9** ರವರಿಗೆ ದೂರು ಸಲ್ಲಿಸಿರುತ್ತಾರೆ ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ, ಸದರಿ ಸಾಕ್ಷಿಯು ಅಭಿಯೋಜನೆಗೆ ಸಾಕ್ಷಿಯನ್ನು ನುಡಿದಿರುತ್ತಾರೆ.

**20).** ಫ್ರಾಸಾ **7** ರವರ ತಮ್ಮ ಪಾಟೀಸವಾಲಿನಲ್ಲಿ ಪಂಚರನ್ನು ಒಳಗೊಂಡು **5** ಜನ ದಾಳಿಗಾಗಿ ಸರ್ಕಾರಿ ವಾಹನದಲ್ಲಿ ಹೋಗಿರುತ್ತೇವೆ, ಸರ್ಕಾರಿ ವಾಹನವನ್ನು ಕಾಳೇಶರವರು ಚಾಲನೆ ಮಾಡುತ್ತಿದ್ದರು, ನಮ್ಮ ಠಾಣೆಯಿಂದ ಇಟಗಿಯ ಕನ್ನಿಹಳ್ಳಿಯ ಕ್ರಾಸ **2** ಕಿಲೋ ಮಿಟರ ಆಗುತ್ತದೆ, ಕನ್ನಿಹಳ್ಳಿಯ ಕ್ರಾಸನಲ್ಲಿ ನಮ್ಮ ವಾಹನವನ್ನು ಉತ್ತರ ದಿಕ್ಕಿಗೆ ಮುಖಮಾಡಿ ನಿಲ್ಲಿಸಿರುತ್ತೇವೆ, ಅಲ್ಲಿ **5-6** ಜನ ಇದ್ದರು, ನಾವು ಘಟನಾ ಸ್ಥಳದಲ್ಲಿ ಫೋಟೋ ಆಗಲಿ ವಿಡಿಯೋ ಆಗಲಿ ಸೆರೆ ಹಿಡಿದಿರುವುದಿಲ್ಲ, ಒಬ್ಬೊಬ್ಬ ಪಂಚರ ಒಂದು ಸಹಿಯನ್ನು ಪಡೆದಿರುತ್ತೇವೆ, ಪಂಚರು ಸಹಿಯನ್ನು ಬೆ.**08.35** ರಿಂದ **09.35** ರ ಒಳಗೆ ಹಾಕಿರುತ್ತಾರೆ, ಗಡ್ಡಿ ಸಂಗನಗೌಡರ ಬೀಡಿ ಅಂಗಡಿಯು ಪೂರ್ವಕ್ಕೆ ಮುಖಮಾಡಿರುತ್ತದೆ ಎಂದು ನುಡಿದಿರುತ್ತಾರೆ.

**21).** ಈ ಪ್ರಕರಣದ ದಾಳಿ ಮಾಡಿ ದೂರನ್ನು ಸಲ್ಲಿಸಿದಂತಹ ಫ್ರಾಸಾ 5 ಮತ್ತು ದಾಳಿಯಲ್ಲಿ ಭಾಗವಹಿಸಿದ ಫ್ರಾಸಾ 7 ರವರ ಸಾಕ್ಷ್ಯಗಳಲ್ಲಿ ವ್ಯತ್ಯಾಸವಿರುತ್ತದೆ. ಫ್ರಾಸಾ 5 ರವರ ಸಾಕ್ಷ್ಯದಲ್ಲಿ ಒಬ್ಬ ಪಚರಿಂದ 4 ಸಹಿಯನ್ನು ಪಡೆದಿರುತ್ತೇವೆ, 4 ಬಾರಿ ಪಂಚರ ಸಹಿಯನ್ನು 4 ಕಡೆಗೆ ತೆಗೆದುಕೊಂಡಿರುತ್ತೇವೆ ಎಂದು ನುಡಿದಿದ್ದು ಆದರೆ ಫ್ರಾಸಾ 7 ರವರು ಒಬ್ಬ ಒಬ್ಬ ಪಂಚರ ಒಂದೊಂದು ಸಹಿಯನ್ನು ಪಡೆದಿರುತ್ತಾರೆ ಎಂದು ನುಡಿದಿರುತ್ತಾರೆ ಹಾಗೂ ಪಂರಾದಂತಹ ಫ್ರಾಸಾ 1 ಮತ್ತು 2 ರವರು ಎರಡು ದಾಖಲೆಗೆ ಸಹಿ ಮಾಡಿರುತ್ತೇವೆ ಎಂದು ನುಡಿದಿರುತ್ತಾರೆ. ಇದರೊಂದಿಗೆ ಫ್ರಾಸಾ 5 ರವರು ಸಂಗನಗೌಡರ ಅಂಗಡಿಯ ಉತ್ತರ ದಿಕ್ಕಿಗೆ ವಾಹವನ್ನು ನಿಲ್ಲಿಸಿರುತ್ತೇವೆ ಎಂದು ನುಡಿದರೆ ಫ್ರಾಸಾ 7 ರವರು ಕನ್ನಿ ಹಳ್ಳಿ ಕ್ರಾಸ್ನಲ್ಲಿ ನಮ್ಮ ವಾಹವನ್ನು ಉತ್ತರ ದಿಕ್ಕಿಗೆ ಮುಖ ಮಾಡಿ ನಿಲ್ಲಿಸಿರುತ್ತೇವೆ ಎಂದು ನುಡಿದಿದ್ದು ಇದರ ಸ್ಪಷ್ಟನೆ ಅಭಿಯೋಜನೆಯೂ ನೀಡಿರುವುದಿಲ್ಲ, ಹೀಗಾಗಿ ಈ ಪ್ರಕರಣದಲ್ಲಿ ಎಲ್ಲಾವೂ ಗೊಂದಲಮಯವಾಗಿರುತ್ತದೆ ಯಾವುದರ ಸ್ಪಷ್ಟನೆಯೂ ಇರುವುದಿಲ್ಲ.

**22).** ಫ್ರಾಸಾ 5 ರವರು ಈ ಪ್ರಕರಣದ ಮಾಹಿತಿಯೂ ಹೇಗೆ ಅವರಿಗೆ ಬಂದಿರುತ್ತದೆ ಎಂದು ತಿಳಿಸಿರುವುದಿಲ್ಲ ಮತ್ತು ಮಧ್ಯವನ್ನು ಖರೀದಿ ಮಾಡಿಕೊಂಡಂತಹ ಜನರನ್ನು ವಿಚಾರಣೆ ಮಾಡಿರುವುದಿಲ್ಲ, ದಾಳಿ ಮಾಡುವಾಗ ಮತ್ತು ಪಂಚನಾಮೆ ಮಾಡುವಾಗ ಛಾಯಾ ಚಿತ್ರಗಳನ್ನು ತೆಗೆದಿರುವುದಿಲ್ಲ, ಹೀಗಾಗಿ ಈ ಪ್ರಕರಣದ ದಾಳಿ ಮತ್ತು ಜಪ್ತುಕಾರ್ಯವು ನಡೆದಿರುವ ಬಗ್ಗೆ ಅನುಮಾನ ಮೂಡುತ್ತದೆ.

**23).** ಪ್ರಾಸಾ 5 ಮತ್ತು 7 ರವರು ತಮ್ಮ ಸಾಕ್ಷ್ಯದಲ್ಲಿ ಪಂಚರ ಸಮಕ್ಷಮ ಆರೋಪಿತನ ಮೇಲೆ ದಾಳಿಮಾಡಿ ಅವನು ಮಾರಾಟ ಮಾಡುತ್ತಿದ್ದ ಮಧ್ಯವನ್ನು ಪಂಚನಾಮೆ ಮಾಡಿರುತ್ತೇವೆ ಎಂದು ನುಡಿದಿದ್ದು, ಆದರೆ ಪಂಚರಾದಂತಹ ಪ್ರಾಸಾ 1 ಮತ್ತು 2 ರವರು ಅವರ ಮುಖ್ಯ ವಿಚಾರಣೆಯಲ್ಲಿ "ಆರೋಪಿತನ ಪರಿಚಯ ತನಗೆ ಇರುವುದಿಲ್ಲ, ತಾನು ಸುಮಾರು 1 ವರ್ಷದ ಹಿಂದೆ ಕೂಲಿ ಮುಗಿಸಿಕೊಂಡು ಮನೆಗೆ ಬರುವ ಸಮಯದಲ್ಲಿ ಪೋಲಿಸರು ತನ್ನನ್ನು ಕರೆದಿರುತ್ತಾರೆ, ಪೋಲಿಸರ ಕೋರಿಕೆಯ ಮೇರೆಗೆ ತಾನು 2 ದಾಖಲೆಗಳ ಮೇಲೆ ಸಹಿ ಮಾಡಿರುತ್ತೇನೆ, ತನ್ನ ಸಮಕ್ಷಮ ಯಾವುದೇ ವಸ್ತುವನ್ನು ಪೋಲಿಸರು ಜಪ್ತು ಪಡಿಸಿಕೊಂಡಿರುವುದಿಲ್ಲ, ನಿಪಿ.1 ಮತ್ತು 2 ರಲ್ಲಿ ಬರೆದಿರುವ ವಿಚಾರಗಳು ತನಗೆ ಗೋತ್ತಿರುವುದಿಲ್ಲವೆಂದು" ನುಡಿದಿದ್ದರಿಂದ ಪ್ರಾಸಾ 5 ಮತ್ತು 7 ರವರು ಪಂಚರ ಸಮಕ್ಷಮ ಜಪ್ತು ಕಾರ್ಯ ಮಾಡಿರುವುದಿಲ್ಲ ಎಂದು ಕಂಡು ಬಂದಿರುತ್ತದೆ, ಹೀಗಾಗಿ ಪ್ರಾಸಾ 5 ಮತ್ತು 7 ರವರ ಸಾಕ್ಷ್ಯದ ಮೇಲೆ ನಂಬಿಕೆ ಮೂಡಿರುವುದಿಲ್ಲ ಹಾಗೂ ಅವರು ಮಾಡಿದ ಜಪ್ತು ಕಾರ್ಯವು ಕಾನೂನು ಬಾಹಿರವಾಗಿರುತ್ತದೆ. ಪ್ರಾಸಾ 5 ರವರು ಮುದ್ದೆ ಮಾಲನ್ನು ಜಪ್ತು ಮಾಡುವಾಗ ಪೋಟೋ ಅಥವಾ ವೀಡಿಯೋಗಳನ್ನು ಸೆರೆಹಿಡಿದಿರುವುದಿಲ್ಲ ಹೀಗಾಗಿ ಈ ಪ್ರಕರಣದ ಜಪ್ತು ಕಾರ್ಯವು ನಿಜವಾಗಲು ನಡೆದಿರುತ್ತದೆಯೇ ಎಂಬ ಅನುಮಾನ ಮೂಡಿಸಿರುತ್ತದೆ.

**24).** ಪ್ರಾಸಾ 5 ರವರ ತನಿಖೆಯಲ್ಲಿ ಸಾರ್ವಜನಿಕರ ಹೇಳಿಕೆಯನ್ನು ಪಡೆಯುವ ಪ್ರಯತ್ನವನ್ನು ಮಾಡಿರುವುದಿಲ್ಲ, ಗುನ್ನೆ ಸ್ಥಳಕ್ಕೆ ಬೇಟಿ ನೀಡಿರುವುದಿಲ್ಲ ಮತ್ತು ಆರೋಪಿತನು ಮುದ್ದೆಮಾಲನ್ನು ಎಲ್ಲಿಂದ ತಂದಿರುತ್ತಾನೆ ಎಂದು ತನಿಖೆಯನ್ನು ಮಾಡಿರುವುದಿಲ್ಲ, ಪ್ರಕರಣದಲ್ಲಿ ಹೇಳಿರುವ ಹಾಗೆ ಸಾರ್ವಜನಿಕ ಸ್ಥಳದಲ್ಲಿ

ಆರೋಪಿತನು ಮದ್ಯವನ್ನು ಕಾನೂನು ಬಾಹಿರವಾಗಿ ಮಾರಾಟ ಮಾಡುತ್ತಿದ್ದನು ಎಂದು ಸಾಬೀತು ಮಾಡಲು ಸಾರ್ವಜನಿಕ ಸ್ಥಳದ ಬಗ್ಗೆ ಯಾವುದೇ ದಾಖಲೆಗಳನ್ನು ಈ ಪ್ರರಣದಲ್ಲಿ ಸಲ್ಲಿಸಿರುವುದಿಲ್ಲ, ಹಾಗೂ ನ್ಯಾಯಾಲಯದ ಮುಂದೆ ಖಾಲಿ ಪೌಚ್ಗಳು ಇದ್ದು ಮು.ಮ.1 ರಲ್ಲಿ ಇದ್ದ ಮದ್ಯ ಏನು ಅಯಿತು ಎಂದು ಅಂತಿಮವರದಿಯಲ್ಲಿ ಎಲ್ಲಿಯೂ ನಮೂದು ಮಾಡಿರುವುದಿಲ್ಲ, ಫ್ರಾಸಾ 5 ರವರು ತನಿಖಾಧಿಕಾರಿಯಾಗಿದ್ದು ಚಾಸಾ 6 ಮತ್ತು 7 ರವರನ್ನು ಪ್ರತ್ಯಕ್ಷ್ಯ ಸಾಕ್ಷಿ ಎಂದು ಅಂತಿಮವರದಿಯಲ್ಲಿ ತೋರಿಸಿದ್ದು, ಆದರೆ ದಾಳಿ ಮಾಡುವ ಸಂದರ್ಭದಲ್ಲಿ ಇದ್ದಂತಹ ಫ್ರಾಸಾ 5 ಮತ್ತು 7 ರವರು ಚಾಸಾ 6 ಮತ್ತು 7 ರವರು ದಾಳಿ ಮಾಡುವ ಸಮಯದಲ್ಲಿ ಉಪಸ್ಥಿತರಿದ್ದ ಬಗ್ಗೆ ಯಾವುದೇ ಉಲ್ಲೇಖವನ್ನು ಅವರ ಸಾಕ್ಷ್ಯದಲ್ಲಿ ಮಾಡಿರುವುದಿಲ್ಲ ಹಾಗೂ ಚಾಸಾ 6 ರವರನ್ನು ಫ್ರಾಸಾ 3 ಎಂದು ಮತ್ತು ಚಾಸಾ 7 ರವರನ್ನು ಫ್ರಾಸಾ 4 ಎಂದು ವಿಚಾರಣೆ ಮಾಡಿದಾಗ ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ತಮಗೆ ಆರೋಪಿತನ ಪರಿಚಯ ಇರುವುದಿಲ್ಲ, ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ತಮಗೆ ಯಾವುದೇ ಮಾಹಿತಿ ಇರುವುದಿಲ್ಲ, ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಹೇಳಿಕೆಯನ್ನು ನೀಡಿರುವುದಿಲ್ಲ, ಅವರ ಸಮಕ್ಷಮ ಯಾವುದೇ ವಸ್ತುವನ್ನು ಪೋಲಿಸರು ಜಪ್ತು ಪಡಿಸಿಕೊಂಡಿರುವುದಿಲ್ಲ, ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಬೇರೆ ಯಾವುದೇ ಮಾಹಿತಿ ತಮಗೆ ಗೊತ್ತಿರುವುದಿಲ್ಲವೆಂದು ನುಡಿದಿದ್ದರಿಂದ ಚಾಸಾ 6 ಮತ್ತು 7 ರವರು ಹೇಗೆ ಈ ಪ್ರಕರಣಕ್ಕೆ ಸಂಬಂದಿಸಿದವರು ಎಂದು ತನಿಖಾಧಿಕಾರಿಯಾದ ಫ್ರಾಸಾ 6 ರವರು ಸ್ಪಷ್ಟನೆ ನೀಡಿರುವುದಿಲ್ಲ, ಹೀಗಾಗಿ ಈ ಪ್ರಕರಣದ ತನಿಖೆಯೂ ಅವರು ಸರಿಯಾಗಿ ಕೈಗೊಂಡಿರುವುದಿಲ್ಲ ಎಂದು ತೋರಿಸುತ್ತದೆ, ಇದರಿಂದಾಗಿ ಈ ಪ್ರಕರಣವು ಸಂಪೂರ್ಣವಾಗಿ ಕಟ್ಟು ಕಥೆಯಿಂದ ಕೂಡಿರುತ್ತದೆ ಎಂದು ತಿಳಿದು ಬರುತ್ತದೆ.

25) ಅಭಿಯೋಜನೆಯು ಈ ಪ್ರಕರಣವನ್ನು ಸಾಭೀತು ಪಡಿಸುವಲ್ಲಿ ಸಂಪೂರ್ಣವಾಗಿ ವಿಫಲರಾಗಿರುತ್ತಾರೆ. ಮೇಲೆ ಚರ್ಚಿಸಲಾದ ಅಂಶಗಳಲ್ಲಿ ಸಾಕಷ್ಟು ಅನುಮಾನಗಳಿದ್ದು ಆರೋಪಿತನೆ ನಿಸ್ಸಂದೇಹವಾಗಿ ಈ ಪ್ರಕರಣದಲ್ಲಿ ಆಪಾಧಿಸಲಾದ ಅಪರಾಧವನ್ನು ಮಾಡಿರುವ ಬಗ್ಗೆ ಸ್ಪಷ್ಟತೆ ಇರುವುದಿಲ್ಲ. ದೋಷಾರೋಪಣೆಯನ್ನು ಸಾಭೀತು ಪಡಿಸಲು ವಿಚಾರಣೆ ಮಾಡಿದ ಸ್ವತಂತ್ರ ಸಾಕ್ಷಿಗಳು ಅಭಿಯೋಜನೆಗೆ ವ್ಯತಿರಿಕ್ತವಾದ ಸಾಕ್ಷ್ಯ ನುಡಿದಿರುತ್ತಾರೆ. ಕೇವಲ ಪೋಲಿಸ್ ಸಿಬ್ಬಂದಿಗಳ ಸಾಕ್ಷ್ಯದ ಮೇಲೆ ಆರೋಪಿತನ ಮೇಲಿರುವ ಅಪರಾದ ಸಾಭೀತು ಪಡಿಸಲು ಸಾಧ್ಯವಿಲ್ಲ. ಅಭಿಯೋಜನೆಯು ಕೇವಲ ದಾಖಲೆಗಳು ಮತ್ತು ಪೋಲಿಸ್ ಸಿಬ್ಬಂದಿಯ ಸಾಕ್ಷಿಗಳ ಆಧಾರದ ಮೇಲೆ ಪ್ರಕರಣವನ್ನು ಸಾಭೀತು ಪಡಿಸಲು ಪ್ರಯತ್ನಿಸಲಾಗಿರುತ್ತದೆ. ಆದರೆ ಮೇಲೆ ಹೇಳಿದ ಅಂಶಗಳನ್ನು ಸಾಭೀತು ಪಡಿಸಲು ಸ್ವತಂತ್ರ ಸಾಕ್ಷಿಗಳ ಮೌಖಿಕ ಸಾಕ್ಷ್ಯದ ಅವಶ್ಯಕತೆ ಇರುತ್ತದೆ. ಮೇಲಾಗಿ ಪೊಲಿಸ್ ಇಲಾಖೆಯಿಂದ ಕ್ಯಾಮಾರ ಇರುವಂತಹ ಮೊಬೈಲ್ ಪೋನುಗಳನ್ನು ಪೋಲಿಸರಿಗೆ ನೀಡಿರುತ್ತಾರೆ ಅಂತಹ ಕ್ಯಾಮಾರದಿಂದ ದಾಳಿ ಮಾಡಿದಾಗ ದಾಳಿ ಮಾಡಿದ ಸಾಕ್ಷಿಯಾಗಿ ಒಂದು ಛಾಯಾ ಚಿತ್ರವನ್ನು ಸಹ ಚಾಸಾ 1 ಅಥವಾ ಅವರ ಸಿಬ್ಬಂದಿಯಾಗಲಿ ತೆಗೆದಿರುವುದಿಲ್ಲ. ಆರೋಪಿತನ ವಿರುದ್ಧ ಈ ಪ್ರಕರಣದಲ್ಲಿ ಆಪಾಧಿಸಲಾದ ಯಾವುದೇ ಅಪರಾಧ ಮಾಡಿದ ಬಗ್ಗೆ ನಿಸ್ಸಂಶಯುತವಾಗಿ ತನಿಖೆಯಲ್ಲಿ ಕಂಡು ಬಂದಿರುವುದಿಲ್ಲ ಮತ್ತು ತನಿಖೆಯು ದೋಷಾಪೂರಿತವಾಗಿರುತ್ತದೆ ಹಾಗೂ ಅಪರಾಧ ಸಾಭೀತುಪಡಿಸಲು ಅಭಿಯೋಜನೆಗೆ ಸಾಧ್ಯವಾಗದೆ ಇರುವುದರಿಂದ ಸಂಶಯದ ಲಾಭವನ್ನು ಆರೋಪಿತನಿಗೆ ನೀಡಿ ಮೇಲಿನ ಅಂಶಗಳಿಗೆ ಈ ಮೂಲಕ ನಕರಾತ್ಮಕವಾದ ಉತ್ತರವನ್ನು ನೀಡಲಾಗಿದೆ.

**26) <u>ಅಂಶ 03:</u> ಈ ಮೇಲಿನ ಕಾರಣಗಳಿಗಾಗಿ ಈ ಕೆಳಗಿನಂತೆ ಆದೇಶಿಸಲಾಗಿದೆ;**

## <u>ಆದೇಶ</u>

- **ಕಲಂ. *248 (1)* ದಂ. ಪ್ರ. ಸಂ. ಅಡಿಯಲ್ಲಿ ಆರೋಪಿತನ ವಿರುದ್ಧ ಕಲಂ.*32* ಮತ್ತು *34* ಕರ್ನಾಟಕ ಅಬಕಾರಿ ಕಾಯ್ದೆ ಅಡಿಯಲ್ಲಿನ ಅಪರಾಧಗಳಿಂದ ಬಿಡುಗಡೆಗೊಳಿಸಲಾಗಿದೆ.**

- **ಆರೋಪಿತನ ಹಾಗೂ ಅವರ ಜಾಮೀನುದಾರರ ಜಾಮೀನು ಮುಚ್ಚಳಿಕೆಗಳನ್ನು ರದ್ದುಪಡಿಸಲಾಗಿದೆ.**
- **ಈ ಪ್ರಕರಣದಲ್ಲಿ ಜಪ್ತು ಪಡಿಸಿಕೊಂಡ ಮು.ಮಾ *01* ಮತ್ತು *2* ನ್ನು ಅನುಪಯುಕ್ತ ವಸ್ತುಗಳು ಆಗಿದ್ದರಿಂದ ಇದನ್ನು ಅಫಿಲು ಅವದಿ ಮುಗಿದ ನಂತರ ಅವುಗಳನ್ನು ನಾಶಪಡಿಸಲು ಅದೇಶಿಸಿಸಲಾಗಿದೆ.**

(ಶೀಘ್ರಲಿಪಿಗಾರನಿಗೆ ನೇರವಾಗಿ ಗಣಕಯಂತ್ರದ ಮೇಲೆ ಉಕ್ತಲೇಖನ ನೀಡಿ ಬೆರಳಚ್ಚಾದ ನಂತರ ತಿದ್ದುಪಡಿ ಮಾಡಿ ತೆರೆದ ನ್ಯಾಯಾಲಯದಲ್ಲಿ ದಿನಾಂಕ **1.6.2026** ರಂದು ಘೋಷಿಸಲಾಯಿತು.)

**(ಶ್ರೀಮತಿ.ಅಕ್ಷತಾ.ಟಿ)**
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು
ಹಡಗಲಿ.

## <u>ಅನುಬಂಧ</u>

<u>ಅಭಿಯೋಜನಾ ಪರ ವಿಚಾರಣೆಯಾದ ಸಾಕ್ಷಿದಾರರ ಪಟ್ಟಿ:</u>

ಫ್ರಾಸಾ-1 : ಇಂದ್ರಪ್ಪ
ಫ್ರಾಸಾ-2 : ಫಕೀರಪ್ಪ
ಫ್ರಾಸಾ-3 : ಅಮರೇಶ
ಫ್ರಾಸಾ-4 : ಮಲ್ಲಿಕಾರ್ಜುನ
ಫ್ರಾಸಾ-5 : ವಿರೇಶ ಮಾಳಶೆಟ್ಟಿ
ಫ್ರಾಸಾ-6 : ಮೂಗಪ್ಪ ಎಂ.
ಫ್ರಾಸಾ-7 : ಜ್ಯೋತಿನಾಯ್ಕ

<u>ಅಭಿಯೋಜನಾ ಪರ ಗುರ್ತಿಸಿದ ದಾಖಲೆಗಳ ಪಟ್ಟಿ:</u>

ನಿ.ಪಿ.1 : ಜಪ್ತು ಪಂಚನಾಮೆ
ನಿ.ಪಿ.2 : ಕಚ್ಚಾ ನಕಾಶೆ
ನಿ.ಪಿ.3 ಮತ್ತು 4 : ಹೇಳಿಕೆಗಳು
ನಿ.ಪಿ.5 : ದೂರು

**ನಿ.ಪಿ.6** : ಪ್ರಥಮ ವರ್ತಮಾನ ವರದಿ
**ನಿ.ಪಿ.7** : ಸ್ವತ್ತಿನ ಪಟ್ಟಿ
**ನಿ.ಪಿ.8** :ರಸಾಯನಿಕ ವಿಪ್ಲೇಷಣಾ ವರದಿ
**ನಿ.ಪಿ.9** : ರಾಸಾಯನಿಕ ವರದಿ

ಆರೋಪಿತನ ಪರ ವಿಚಾರಣೆಯಾದ ಸಾಕ್ಷಿದಾರರ ಪಟ್ಟಿ ಮತ್ತು ದಾಖಲೆಗಳ ಪಟ್ಟಿ:
-- ಇರುವುದಿಲ್ಲ--
ಆರೋಪಿತನ ಪರ ನಿಶಾನೆಗೊಳಿಸಲ್ಪಟ್ಟ ದಸ್ತಾವೇಜಗಳ ಯಾದಿ

**M.O.No.1** ಮತ್ತು **2:** ಟೆಟ್ರಾ ಪ್ಯಾಕ್ಗಳು ಮತ್ತು ಖಾಲಿ ಚೀಲ

**(ಶ್ರೀಮತಿ.ಅಕ್ಷತಾ.ಟಿ)**
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು
ಹಡಗಲಿ.